# ಶಿರ್ಕ್ ಮತ್ತು ಅದರ ವಿಧಗಳು

[ الشرك وأنواعه ]

[**Kannada –** ಕನ್ನಡ – كنادي ]


**ಮುಹಮ್ಮದ್ ಹಂಝಾ ಪುತ್ತೂರು**

**محمد حمزة بتوري**



IslamHouse.com

1435 – 2014

بِسْمِ اللهِ الرَّحْمَـنِ الرَّحِيم

ಇದು ಪ್ರತಿಯೊಬ್ಬ ಮುಸ್ಲಿಮನೂ ಗಮನವಿಟ್ಟು ಓದಬೇಕಾದ ಒಂದು ಲೇಖನವಾಗಿದೆ. ಯಾಕೆಂದರೆ ಮಹಾಪಾಪಗಳ ಪೈಕಿ ಅತಿ ಅಪಾಯಕಾರಿಯೂ ಅತಿಭಯಾನಕವೂ ಆಗಿರುವ ಶಿರ್ಕ್‌ನ ಬಗ್ಗೆ ಇದರಲ್ಲಿ ವಿವರಿಸಲಾಗುತ್ತದೆ. ಶಿರ್ಕ್ ಎಂಬುದು ಮರಣಕ್ಕೆ ಮುಂಚೆ ಅದರಿಂದ ಸಂಪೂರ್ಣ ಮುಕ್ತನಾಗಿ ಪಶ್ಚಾತ್ತಾಪಪಟ್ಟವನ ಹೊರತು ಇತರ ಯಾರಿಗೂ ಅಲ್ಲಾಹು ಎಂದೆಂದಿಗೂ ಕ್ಷಮಿಸದ ಒಂದು ಮಹಾ ಅಪರಾಧವಾಗಿದೆ.

ಅಲ್ಲಾಹು ತಆಲಾ ಹೇಳುತ್ತಾನೆ:

﴿ إِنَّ اللَّهَ لَا يَغْفِرُ أَنْ يُشْرَكَ بِهِ وَيَغْفِرُ مَا دُونَ ذَلِكَ لِمَنْ يَشَاءُ وَمَنْ يُشْرِكْ بِاللَّهِ فَقَدِ افْتَرَى إِثْمًا عَظِيمًا ﴾

**“ಖಂಡಿತವಾಗಿಯೂ ಅಲ್ಲಾಹು ಅವನೊಂದಿಗೆ ಶಿರ್ಕ್ ಮಾಡಲಾಗುವುದನ್ನು ಕ್ಷಮಿಸುವುದಿಲ್ಲ. ಅದರ ಹೊರತಾಗಿರುವುದನ್ನು ಅವನಿಚ್ಛಿಸುವವರಿಗೆ ಅವನು ಕ್ಷಮಿಸುವನು. ಯಾರು ಅಲ್ಲಾಹನೊಂದಿಗೆ ಶಿರ್ಕ್ ಮಾಡುತ್ತಾನೋ ಅವನು ಮಹಾ ಪಾಪವೊಂದನ್ನು ಹೆಣೆದವನಾಗಿದ್ದಾನೆ.” [ಕುರ್‌ಆನ್ 4:48]**

ಅಲ್ಲಾಹು ತಆಲಾ ಹೇಳುತ್ತಾನೆ:

﴿ إِنَّهُ مَنْ يُشْرِكْ بِاللَّهِ فَقَدْ حَرَّمَ اللَّهُ عَلَيْهِ الْجَنَّةَ وَمَأْوَاهُ النَّارُ وَمَا لِلظَّالِمِينَ مِنْ أَنْصَارٍ ﴾

**“ಖಂಡಿತವಾಗಿಯೂ ಯಾರು ಅಲ್ಲಾಹನೊಂದಿಗೆ ಶಿರ್ಕ್ ಮಾಡುತ್ತಾನೋ ಅವನಿಗೆ ಅಲ್ಲಾಹು ಸ್ವರ್ಗವನ್ನು ನಿಷಿದ್ಧಗೊಳಿಸಿದ್ದಾನೆ ಮತ್ತು ಅವನ ವಾಸಸ್ಥಳವು ನರಕಾಗ್ನಿಯಾಗಿದೆ. ಅವನಿಗೆ ಸಹಾಯಕರಾಗಿ ಯಾರೂ ಇಲ್ಲ.” [ಕುರ್‌ಆನ್ 5:72]**

ಪ್ರವಾದಿ(ﷺ)ರವರು ಹೇಳುತ್ತಾರೆ:

«أَلَا أُنَبِّئُكُمْ بِأَكْبَرِ الْكَبَائِرِ؟ الْإِشْرَاكُ بِاللَّهِ».

**“ಮಹಾಪಾಪಗಳಲ್ಲೇ ಅತಿದೊಡ್ಡ ಮಹಾಪಾಪದ ಬಗ್ಗೆ ನಾನು ನಿಮಗೆ ತಿಳಿಸಿಕೊಡಲೇ? ಅದು ಅಲ್ಲಾಹನೊಂದಿಗೆ ಶಿರ್ಕ್ ಮಾಡುವುದಾಗಿದೆ.” [ಅಲ್‌ಬುಖಾರೀ ಮತ್ತು ಮುಸ್ಲಿಮ್]**

## ♦ ಶಿರ್ಕ್ ಎಂದರೇನು?

ಅಲ್ಲಾಹನ ಹಕ್ಕುಗಳಲ್ಲಿ ಸೇರಿದ ಯಾವುದನ್ನಾದರೂ ಅಲ್ಲಾಹೇತರರಿಗೆ ನೀಡುವುದನ್ನು ಶಿರ್ಕ್ ಎನ್ನಲಾಗುತ್ತದೆ. ಶಿರ್ಕ್ ಎಂದರೆ ಅಲ್ಲಾಹನಿಗೆ ಮಾತ್ರ ಸೀಮಿತವಾಗಿರುವ ವಿಷಯಗಳಲ್ಲಿ ಅವನೊಂದಿಗೆ ಅಲ್ಲಾಹೇತರರನ್ನು ಸಮೀಕರಿಸುವುದಾಗಿದೆಯೆಂದೂ ಹೇಳಲಾಗುತ್ತದೆ.

ಸಮೀಕರಣವು ಎರಡು ರೀತಿಯಲ್ಲಿದೆ:

1. **ವಿಶ್ವಾಸದಲ್ಲಿರುವ ಸಮೀಕರಣ (تَسْوِيَةٌ فِي الاِعْتِقَادِ)**. ಇದನ್ನು ಹಿರಿಯ ಶಿರ್ಕ್ (الشِّرْكُ الْأَكْبَرُ) ಎನ್ನಲಾಗುತ್ತದೆ.

ಇದು ಅಲ್ಲಾಹನ ಪ್ರಭುತ್ವಕ್ಕೆ (ರುಬೂಬಿಯ್ಯತ್‌ಗೆ) ಸಂಬಂಧಿಸಿದ ವಿಷಯಗಳಲ್ಲಾಗಿರಬಹುದು. ಉದಾಹರಣೆಗೆ, ಅಲ್ಲಾಹನಂತೆಯೇ ಶೂನ್ಯದಿಂದ ಸೃಷ್ಟಿ ಮಾಡುವ ಇನ್ನೊಬ್ಬ ಸೃಷ್ಟಿಕರ್ತನಿದ್ದಾನೆ ಎಂದು ವಿಶ್ವಾಸವಿಡುವುದು ವಿಶ್ವಾಸದಲ್ಲಿರುವ ಸಮೀಕರಣವಾಗಿದೆ.

ಅಥವಾ ಇದು ಆರಾಧನೆಗೆ (ಇಬಾದತ್‌ಗೆ) ಸಂಬಂಧಿಸಿದ ವಿಷಯದಲ್ಲಾಗಿರಬಹುದು. ಉದಾಹರಣೆಗೆ, ಅಲ್ಲಾಹನಂತೆಯೇ ಆರಾಧಿಸಲು ಅರ್ಹತೆಯನ್ನು ಹೊಂದಿರುವ ಇನ್ನೊಬ್ಬ ಆರಾಧ್ಯನಿದ್ದಾನೆ ಎಂದು ವಿಶ್ವಾಸವಿಡುವುದು ವಿಶ್ವಾಸದಲ್ಲಿರುವ ಸಮೀಕರಣವಾಗಿದೆ. ಔಲಿಯಾಗಳೊಂದಿಗೆ ಪ್ರಾರ್ಥಿಸಬಹುದು ಎಂಬ ವಿಶ್ವಾಸವು ಕೂಡ ಇದರಲ್ಲಿ ಒಳಪಡುತ್ತದೆ.

ಅಥವಾ ಇದು ಅಲ್ಲಾಹನ ನಾಮ ಮತ್ತು ವಿಶೇಷಣಗಳಿಗೆ (ಅಲ್‌ಅಸ್ಮಾಉ ವಸ್ಸಿಫಾತ್‌ಗೆ) ಸಂಬಂಧಿಸಿದ ವಿಷಯದಲ್ಲಾಗಿರಬಹುದು. ಉದಾಹರಣೆಗೆ, ಅಲ್ಲಾಹನಂತೆಯೇ ವಿದೂರದಿಂದ ಪ್ರಾರ್ಥನೆಯನ್ನು ಆಲಿಸುವ ಸಾಮರ್ಥ್ಯವಿರುವ ಬೇರೊಬ್ಬನಿದ್ದಾನೆ, ಅಥವಾ ಅಲ್ಲಾಹನಂತೆಯೇ ಪ್ರಾರ್ಥನೆಗಳಿಗೆ ಉತ್ತರ ಕೊಡುವ ಸಾಮರ್ಥ್ಯವಿರುವ ಬೇರೊಬ್ಬನಿದ್ದಾನೆ ಎಂದು ವಿಶ್ವಾಸವಿಡುವುದು. ಶೈಖ್ ಜೀಲಾನಿಯವರು ನಮ್ಮ ಪ್ರಾರ್ಥನೆಯನ್ನು ಆಲಿಸುತ್ತಾರೆ ಮತ್ತು ಉತ್ತರ ನೀಡುತ್ತಾರೆಂದು ವಿಶ್ವಾಸವಿಡುವುದು ಇದರಲ್ಲಿ ಒಳಪಡುತ್ತದೆ.

2. **ವಿಶ್ವಾಸವಿಲ್ಲದೆ ಮಾತುಗಳಲ್ಲಿರುವ ಸಮೀಕರಣ (تَسْوِيَةٌ فِي اللَّفْظِ دُونَ الاِعْتِقَادِ):** ಇದನ್ನು ಕಿರಿಯ ಶಿರ್ಕ್ (الشِّرْكُ الْأَصْغَرُ) ಎನ್ನಲಾಗುತ್ತದೆ.

ಉದಾಹರಣೆಗೆ, ಅಲ್ಲಾಹೇತರರ ಮೇಲೆ ಆಣೆ ಹಾಕುವುದು. ಅಲ್ಲಾಹನ ಮೇಲೆ ಮಾತ್ರ ಆಣೆ ಹಾಕಬೇಕಾಗಿದೆ. ಆದರೆ ಒಬ್ಬ ವ್ಯಕ್ತಿಯ ಮೇಲೆ ಅಥವಾ ಒಂದು ವಸ್ತುವಿನ ಮೇಲೆ ಆಣೆ ಹಾಕುವಾಗ ಆ ವ್ಯಕ್ತಿಯನ್ನು ಅಥವಾ ಆ ವಸ್ತುವನ್ನು ಹೃದಯದ ಮೂಲಕ ವಿಶ್ವಾಸವಿಟ್ಟು ಅಲ್ಲಾಹನೊಂದಿಗೆ ಸಮೀಕರಣ ಮಾಡದಿದ್ದರೆ ಅದು ಕಿರಿಯ ಶಿರ್ಕ್ ಆಗಿದೆ. ಹೃದಯದ ಮೂಲಕ ವಿಶ್ವಾಸವಿಟ್ಟು ಸಮೀಕರಣ ಮಾಡಿದರೆ ಅದು ಹಿರಿಯ ಶಿರ್ಕ್ ಆಗಿದೆ. ಅಂದರೆ ಶೈಖ್ ಜೀಲಾನಿಯವರ ಮೇಲೆ ಆಣೆಯಿಡುವ ವ್ಯಕ್ತಿ ತನ್ನ ಆಣೆಯು ಸುಳ್ಳಾಗಿದ್ದರೆ ಶೈಖ್‌ರವರು ತನಗೆ ಕೆಡುಕನ್ನು ತರುವರು ಮತ್ತು ತನ್ನ ಆಣೆಯು ಸತ್ಯವಾಗಿದ್ದರೆ ಅವರು ತನಗೆ ಒಳಿತನ್ನು ತರುವರು ಎಂದು ಹೃದಯದಲ್ಲಿ ವಿಶ್ವಾಸವಿಡುವುದಾದರೆ ಅದು ಹಿರಿಯ ಶಿರ್ಕ್ ಆಗಿದೆ.

ಹಿರಿಯ ಶಿರ್ಕ್ ಅದನ್ನು ಮಾಡಿದ ವ್ಯಕ್ತಿಯನ್ನು ಇಸ್ಲಾಮಿನಿಂದ ಹೊರತಳ್ಳುತ್ತದೆ. ಆದರೆ ಕಿರಿಯ ಶಿರ್ಕ್ ಅದನ್ನು ಮಾಡಿದ ವ್ಯಕ್ತಿಯನ್ನು ಇಸ್ಲಾಮಿನಿಂದ ಹೊರತಳ್ಳುವುದಿಲ್ಲ.

## ♦ ಶಿರ್ಕ್‌ನ ವಿಧಗಳು ಮತ್ತು ಉಪವಿಧಗಳು:

ಶಿರ್ಕ್ ಮೂರು ವಿಧಗಳನ್ನು ಹೊಂದಿದೆ:

1. ಪ್ರಭುತ್ವದಲ್ಲಿರುವ ಶಿರ್ಕ್.
2. ಆರಾಧನೆಯಲ್ಲಿರುವ ಶಿರ್ಕ್.
3. ಅಲ್ಲಾಹನ ನಾಮ ಮತ್ತು ವಿಶೇಷಣಗಳಲ್ಲಿರುವ ಶಿರ್ಕ್.

## ♦ ಪ್ರಭುತ್ವದಲ್ಲಿರುವ ಶಿರ್ಕ್:

ಪ್ರಭುತ್ವದಲ್ಲಿರುವ ಶಿರ್ಕ್ ಎಂದರೆ ಅಲ್ಲಾಹು ಮಾತ್ರ ಮಾಡುವ ಕ್ರಿಯೆಗಳಲ್ಲಿ ಯಾವುದಾದರೂ ಒಂದನ್ನು ಅಲ್ಲಾಹೇತರರಿಗೆ ನೀಡುವುದು. ಇದರಲ್ಲಿ ಎರಡು ಉಪವಿಧಗಳಿವೆ:

**ಒಂದು: ನಿಷ್ಕ್ರಿಯಗೊಳಿಸುವುದರಲ್ಲಿರುವ ಶಿರ್ಕ್ (شِرْكُ تَعْطِيل):**

ಅಂದರೆ ಪ್ರಭುತ್ವದ ವೈಶಿಷ್ಟ್ಯತೆಗಳನ್ನು ನಿಷ್ಕ್ರಿಯಗೊಳಿಸುವುದು ಮತ್ತು ಅಲ್ಲಾಹು ಸರ್ವಲೋಕಗಳ ರಬ್ಬ್ ಆಗಿದ್ದಾನೆಂಬುದನ್ನು ನಿರಾಕರಿಸುವುದು. ಉದಾಹರಣೆಗೆ, ಫಿರ್‌ಔನ್ ಮಾಡಿದ ಶಿರ್ಕ್.

﴿ وَقَالَ فِرْعَوْنُ يَا هَامَانُ ابْنِ لِي صَرْحًا لَعَلِّي أَبْلُغُ الْأَسْبَابَ * أَسْبَابَ السَّمَاوَاتِ فَأَطَّلِعَ إِلَى إِلَهِ مُوسَى وَإِنِّي لَأَظُنُّهُ كَاذِبًا ﴾

**“ಮತ್ತು ಫಿರ್‌ಔನ್ ಹೇಳಿದನು: ಓ ಹಾಮಾನ್, ನನಗೊಂದು ಗೋಪುರವನ್ನು ನಿರ್ಮಿಸಿಕೊಡು. ನಾನು ಆ ದಾರಿಗಳನ್ನು ತಲುಪುವುದಕ್ಕಾಗಿ. ಅಂದರೆ ಆಕಾಶಗಳೆಡೆಗಿರುವ ದಾರಿಗಳನ್ನು. ತರುವಾಯ ಮೂಸಾರ ಆರಾಧ್ಯನನ್ನು ನೋಡುವುದಕ್ಕಾಗಿ. ಖಂಡಿತವಾಗಿಯೂ ಅವನು (ಮೂಸಾ) ಸುಳ್ಳು ಹೇಳುತ್ತಾನೆಂದು ನಾನು ಭಾವಿಸುತ್ತೇನೆ.” [ಕುರ್‌ಆನ್ 40:36–37]**

ಅಂದರೆ ನಮಗೊಬ್ಬ ರಬ್ಬ್ ಇದ್ದಾನೆ ಮತ್ತು ಆ ರಬ್ಬ್ ಆಕಾಶಗಳ ಮೇಲಿದ್ದಾನೆ ಎಂದು ಮೂಸಾ ಹೇಳುವುದು ಸುಳ್ಳೆಂದು ಭಾವಿಸಿದ ಫಿರ್‌ಔನ್ ಆ ರಬ್ಬ್ ಎಂಬವನು ಇದ್ದರೆ ಅವನನ್ನು ನಾನು ನೋಡುವುದಕ್ಕಾಗಿ ತನಗೊಂದು ಮಹಾ ಗೋಪುರವನ್ನು ನಿರ್ಮಿಸಿಕೊಡಬೇಕೆಂದು ಅವನು ಹಾಮಾನ್‌ಗೆ ಆಜ್ಞಾಪಿಸುತ್ತಾನೆ.

ಅದೇ ರೀತಿ ‘ವಹ್ದತುಲ್ ವುಜೂದ್’ನವರು (ಅದ್ವೈತವಾದಿಗಳು) ಮಾಡುವ ಶಿರ್ಕ್. ಇವರು ನಾನು, ನೀನು, ಅದು, ಎಲ್ಲರೂ ಎಲ್ಲವೂ ಅಲ್ಲಾಹು ಎನ್ನುತ್ತಾರೆ. ಅಲ್ಲಾಹನ ಮತ್ತು ದಾಸನ ಮಧ್ಯೆ ಇವರು ಯಾವುದೇ ವ್ಯತ್ಯಾಸವನ್ನು ಕಲ್ಪಿಸುವುದಿಲ್ಲ.

**ಎರಡು: ಹೋಲಿಕೆಯಲ್ಲಿರುವ ಶಿರ್ಕ್ (شِرْكُ تَمْثِيل):**

ಅಂದರೆ ಪ್ರಭುತ್ವದ ವೈಶಿಷ್ಟ್ಯಗಳಲ್ಲಿ ಸೇರಿದ ಯಾವುದಾದರೂ ಒಂದರಲ್ಲಿ ಸೃಷ್ಟಿಕರ್ತನೊಂದಿಗೆ ಸೃಷ್ಟಿಯನ್ನು ಸಮೀಕರಿಸುವುದು ಅಥವಾ ಅದನ್ನು ಅಲ್ಲಾಹೇತರರಿಗೆ ಸೇರಿಸಿ ಹೇಳುವುದು. ಉದಾಹರಣೆಗೆ, ಗೋರಿಯಾರಾಧಕರು ಮಾಡುವ ಶಿರ್ಕ್. ಔಲಿಯಾಗಳ ಮರಣಾನಂತರ ಅವರ ಆತ್ಮಗಳು ಪ್ರಾಪಂಚಿಕ ವಿಷಯಗಳನ್ನು ನಿಯಂತ್ರಿಸುತ್ತವೆ, ಬಯಕೆಗಳನ್ನು ಈಡೇರಿಸಿಕೊಡುತ್ತವೆ ಮತ್ತು ಸಂಕಷ್ಟಗಳನ್ನು ದೂರೀಕರಿಸುತ್ತವೆ ಎಂದು ಗೋರಿಯಾರಾಧಕರು ವಿಶ್ವಾಸವಿಡುತ್ತಾರೆ.

## ♦ ಆರಾಧನೆಯಲ್ಲಿರುವ ಶಿರ್ಕ್:

ಆರಾಧನೆಯಲ್ಲಿರುವ ಶಿರ್ಕ್ ಎಂದರೆ ಸೃಷ್ಟಿಗಳು ಮಾಡುವ ಕ್ರಿಯೆಗಳಲ್ಲಿ ಯಾವುದಾದರೂ ಒಂದನ್ನು ಅಲ್ಲಾಹೇತರರಿಗೆ ನೀಡುವುದು. ಇದರ ಉಪವಿಧಗಳು ಹೀಗಿವೆ:

**ಒಂದು: ಪ್ರಾರ್ಥನೆಯಲ್ಲಿರುವ ಶಿರ್ಕ್ (شِرْكُ الدُّعَاء):**

ಅಂದರೆ ಅಲ್ಲಾಹನಿಗೆ ಮಾತ್ರ ಮಾಡಲು ಸಾಮರ್ಥ್ಯವಿರುವ ವಿಷಯಗಳನ್ನು ಅಲ್ಲಾಹೇತರರೊಂದಿಗೆ ಬೇಡುವುದು ಅಥವಾ ಅಲ್ಲಾಹನಿಗೆ ಮಾತ್ರ ಮಾಡಲು ಸಾಮರ್ಥ್ಯವಿರುವ ವಿಷಯಗಳಲ್ಲಿ ಅಲ್ಲಾಹೇತರರೊಂದಿಗೆ ಸಹಾಯ ಯಾಚಿಸುವುದು. ಉದಾಹರಣೆಗೆ ತನಗೊಂದು ಮಗುವನ್ನು ದಯಪಾಲಿಸಬೇಕೆಂದು ಔಲಿಯಾಗಳೊಂದಿಗೆ ಬೇಡುವುದು. ಅಥವಾ ತನ್ನ ಕಷ್ಟವನ್ನು ನಿವಾರಿಸಬೇಕೆಂದು ಔಲಿಯಾಗಳೊಂದಿಗೆ ಸಹಾಯ ಯಾಚಿಸುವುದು.

**ಎರಡು: ಶಫಾಅತ್‌ನಲ್ಲಿರುವ ಶಿರ್ಕ್ (شِرْكُ الشَّفَاعَة):**

ಅಂದರೆ ಔಲಿಯಾಗಳು ತಮಗೆ ಅಲ್ಲಾಹನ ಬಳಿ ಶಫಾಅತ್ ಮಾಡುತ್ತಾರೆ ಮತ್ತು ತಮ್ಮನ್ನು ಅಲ್ಲಾಹನಿಗೆ ಹತ್ತಿರಗೊಳಿಸುತ್ತಾರೆ ಎಂಬ ನಂಬಿಕೆಯಿಂದ ಅವರಿಗೆ ಆರಾಧನೆಗಳನ್ನು ಸಲ್ಲಿಸುವುದು, ಅವರ ದರ್ಗಾಗಳನ್ನು ಸಂದರ್ಶಿಸುವುದು ಮತ್ತು ಅವರಿಗೆ ಹರಕೆ ಬಲಿಗಳನ್ನು ಅರ್ಪಿಸುವುದು.

**ಮೂರು: ನಿಯ್ಯತ್, ಇಚ್ಛೆ ಮತ್ತು ಉದ್ದೇಶದಲ್ಲಿರುವ ಶಿರ್ಕ್ ( شِرْكُ النِّيَّةِ وَالْإِرَادَةِ وَالْقَصْد):**

ಅಂದರೆ ತೋರಿಕೆಗಾಗಿ, ಅಥವಾ ಇಹಲೋಕಕ್ಕಾಗಿ ಮತ್ತು ಐಹಿಕ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಇಬಾದತ್ ಮಾಡುವುದು.

ತೋರಿಕೆಯು (ರಿಯಾಅ್) ಎರಡು ವಿಧವನ್ನು ಹೊಂದಿದೆ:

1. **ಕರ್ಮದ ಮೂಲಕವಿರುವ ತೋರಿಕೆ (رِيَاءٌ بِالْعَمَل):**

ಅಂದರೆ ಒಬ್ಬ ವ್ಯಕ್ತಿ ಇಬಾದತ್ ಮಾಡುವುದು ಅಲ್ಲಾಹನಿಗೋಸ್ಕರವಲ್ಲ, ಬದಲಾಗಿ ಯಾವುದೋ ಐಹಿಕ ಉದ್ದೇಶವನ್ನು ಈಡೇರಿಸುವುದಕ್ಕಾಗಿದೆ ಎಂದಾದರೆ ಅದು ಕರ್ಮದ ಮೂಲಕವಿರುವ ತೋರಿಕೆಯಾಗಿದೆ. ಉದಾಹರಣೆಗೆ ಒಬ್ಬ ವ್ಯಕ್ತಿ ನಮಾಝ್ ಮಾಡುವಾಗ ಅವನ ನಿಯ್ಯತ್ ಅಲ್ಲಾಹನಿಗಾಗಿಯಲ್ಲ, ಬದಲಾಗಿ ಐಹಿಕ ಉದ್ದೇಶ ವನ್ನು ಈಡೇರಿಸುವುದಕ್ಕಾಗಿದೆ. ಇದು ಹಿರಿಯ ಶಿರ್ಕ್ ಆಗಿದೆ.

2. **ಕರ್ಮದಲ್ಲಿರುವ ತೋರಿಕೆ (رِيَاءٌ فِي الْعَمَل):**

ಅಂದರೆ ಒಬ್ಬ ವ್ಯಕ್ತಿ ಅಲ್ಲಾಹನಿಗೋಸ್ಕರ ಇಬಾದತ್ ಮಾಡುತ್ತಾನೆ, ಆದರೆ ತರುವಾಯ ಆಕಸ್ಮಿಕವಾಗಿ ಅವನ ನಿಯ್ಯತ್‌ನಲ್ಲಿ ತೋರಿಕೆಯು ಸೇರಿಕೊಂಡು, ಅವನು ಜನರಿಗೋಸ್ಕರ ಅದನ್ನು ಅಂದವಾಗಿ ಮತ್ತು ಉತ್ತಮವಾಗಿ ನಿರ್ವಹಿಸುತ್ತಾನೆ ಎಂದಾದರೆ ಅದು ಕರ್ಮದಲ್ಲಿರುವ ತೋರಿಕೆಯಾಗಿದೆ. ಉದಾಹರಣೆಗೆ, ಒಬ್ಬ ವ್ಯಕ್ತಿ ನಮಾಝ್ ಮಾಡುವಾಗ ಅವನ ನಿಯ್ಯತ್ ಅಲ್ಲಾಹನಿಗಾಗಿರುತ್ತದೆ. ಆದರೆ ಯಾರಾದರೂ ತನ್ನ ನಮಾಝನ್ನು ನೋಡುತ್ತಿದ್ದಾರೆ ಎಂಬ ಅರಿವಾದಾಗ ಅವನು ತನ್ನ ನಮಾಝನ್ನು ಅಂದವಾಗಿ ಮತ್ತು ಉತ್ತಮವಾಗಿ ನಿರ್ವಹಿಸುತ್ತಾನೆ. ಇದು ಕಿರಿಯ ಶಿರ್ಕ್ ಆಗಿದೆ.

### ನಾಲ್ಕು: ಆಜ್ಞಾಪಾಲನೆ ಮಾಡುವುದರಲ್ಲಿರುವ ಶಿರ್ಕ್ (شِرْكُ الطَّاعَة):

ಅಂದರೆ ಅಲ್ಲಾಹೇತರರನ್ನು ಕಾನೂನು ನಿರ್ಮಾಪಕರನ್ನಾಗಿ ಮಾಡಿಕೊಳ್ಳುವುದು, ಅಥವಾ ಕಾನೂನು ನಿರ್ಮಾಣದಲ್ಲಿ ಅಲ್ಲಾಹನೊಂದಿಗೆ ಬೇರೆಯವರನ್ನು ಸಹಭಾಗಿಯನ್ನಾಗಿ ಮಾಡಿಕೊಳ್ಳುವುದು. ಅವರು ನೀಡುವ ತೀರ್ಪಿಗೆ ತಲೆಬಾಗುವುದು ಮತ್ತು ತೃಪ್ತಿಯನ್ನು ಸೂಚಿಸುವುದು. ಅವರು ಹಲಾಲ್ ಮಾಡಿರುವುದನ್ನು ಹಲಾಲ್ ಎಂದು ಪರಿಗಣಿಸುವುದು ಮತ್ತು ಅವರು ಹರಾಮ್ ಮಾಡಿರುವುದನ್ನು ಹರಾಮ್ ಎಂದು ಪರಿಗಣಿಸುವುದು.

### ಐದು: ಪ್ರೀತಿಸುವುದರಲ್ಲಿರುವ ಶಿರ್ಕ್ (شِرْكُ الْمَحَبَّة):

ಅಂದರೆ ಸೃಷ್ಟಿಗಳಲ್ಲಿ ಕೆಲವರನ್ನು ಅಲ್ಲಾಹನಿಗೆ ಸಮಾನರನ್ನಾಗಿ ಮಾಡಿಕೊಂಡು ಅಲ್ಲಾಹನನ್ನು ಪ್ರೀತಿಸುವಂತೆಯೇ ಅವರನ್ನು ಪ್ರೀತಿಸುವುದು. ಅಲ್ಲಾಹನ ಆಜ್ಞಾಪಾಲನೆ ಮಾಡುವುದಕ್ಕಿಂತಲೂ ಅವರ ಆಜ್ಞಾಪಾಲನೆ ಮಾಡುವುದಕ್ಕೆ ಆದ್ಯತೆಯನ್ನು ನೀಡುವುದು. ಅವರ ಸ್ಮರಣೆಯಲ್ಲಿ ಮತ್ತು ಅವರೊಂದಿಗಿರುವ ಪ್ರಾರ್ಥನೆಯಲ್ಲಿ ತಲ್ಲೀನರಾಗುವುದು. ಉದಾಹರಣೆಗೆ, ಅಲ್ಲಾಹನನ್ನು ಪ್ರೀತಿಸುವಂತೆಯೇ ಅಥವಾ ಅದಕ್ಕಿಂತಲೂ ಹೆಚ್ಚು ಔಲಿಯಾಗಳನ್ನು ಪ್ರೀತಿಸುವುದು, ಅವರನ್ನು ಸ್ಮರಿಸುವುದರಲ್ಲೇ ತಲ್ಲೀನರಾಗುವುದು ಮತ್ತು ನಮಾಝ್ ಮುಂತಾದ ಕಡ್ಡಾಯ ಕರ್ಮಗಳನ್ನು ಬಿಟ್ಟು ದರ್ಗಾ ಸೇವೆಯಲ್ಲಿ ನಿರತರಾಗುವುದು.

### ಆರು: ಭಯಪಡುವುದರಲ್ಲಿರುವ ಶಿರ್ಕ್ (شِرْكُ الْخَوْف):

ಅಂದರೆ ಅಲ್ಲಾಹೇತರರನ್ನು, ಅವರು ತಮ್ಮ ಮೇಲೆ ಪರಿಣಾಮ ಬೀರುವರು, ಅಥವಾ ಅಲ್ಲಾಹನಿಗೆ ಮಾತ್ರ ಮಾಡಲು ಸಾಮರ್ಥ್ಯವಿರುವುದನ್ನು ಅವರು ತಮ್ಮ ಮೇಲೆ ಎರಗಿಸುವರು ಎಂದು ಭಯಪಡುವುದು. ಉದಾಹರಣೆಗೆ, ದರ್ಗಾಗಳನ್ನು ಗೌರವಿಸದಿದ್ದರೆ ಅಥವಾ ಔಲಿಯಾಗಳಿಗೆ ಹರಕೆ ಸಲ್ಲಿಸದಿದ್ದರೆ ಅವರು

ಕೋಪಿಸಿಕೊಂಡು ಅನಾಹುತಗಳು ಎರಗುವಂತೆ ಅಥವಾ ಮಕ್ಕಳುಂಟಾಗದಂತೆ ಮಾಡುತ್ತಾರೆಂದು ಭಯಪಡುವುದು.

## ♦ ಅಲ್ಲಾಹನ ನಾಮ ಮತ್ತು ವಿಶೇಷಣಗಳಲ್ಲಿರುವ ಶಿರ್ಕ್:

ಅಲ್ಲಾಹನ ನಾಮ ಮತ್ತು ವಿಶೇಷಣಗಳಲ್ಲಿ ಶಿರ್ಕ್ ಮಾಡುವುದು ಎಂದರೆ ಅಲ್ಲಾಹನ ನಾಮ ಅಥವಾ ವಿಶೇಷಣಗಳನ್ನು ಅಲ್ಲಾಹೇತರರಿಗೆ ನೀಡುವುದಾಗಿದೆ. ಇದರ ಉಪವಿಧಗಳು ಹೀಗಿವೆ:

**ಒಂದು: ಹೋಲಿಕೆಯಲ್ಲಿರುವ ಶಿರ್ಕ್ (شِرْكُ التَّمْثِيل):**

ಅಂದರೆ ಸೃಷ್ಟಿಗಳಿಗೆ ಇರುವಂತಹ ವಿಶೇಷಣಗಳನ್ನು ಅಲ್ಲಾಹನಿಗೆ ದೃಢೀಕರಿಸುವುದು. ಉದಾಹರಣೆಗೆ, ಮನುಷ್ಯನಿಗಿರುವಂತಹುದೇ ಕೈ ಕಾಲುಗಳು ಅಲ್ಲಾಹನಿಗಿವೆ ಎಂದು ಹೇಳುವುದು. ಆದರೆ ಅಲ್ಲಾಹನಿಗಿರುವ ವಿಶೇಷಣಗಳನ್ನು ಸೃಷ್ಟಿಗಳ ವಿಶೇಷಣಗಳೊಂದಿಗೆ ಹೋಲಿಸದೆ ದೃಢೀಕರಿಸಿದರೆ ಅದು ಹೋಲಿಕೆಯಲ್ಲಿರುವ ಶಿರ್ಕ್ ಆಗುವುದಿಲ್ಲ.

**ಎರಡು: ನಿಷ್ಕ್ರಿಯತೆಯಲ್ಲಿರುವ ಶಿರ್ಕ್ (شِرْكُ التَّعْطِيل):**

ಅಂದರೆ ಅಲ್ಲಾಹನ ವಿಶೇಷಣಗಳನ್ನು ನಿಷ್ಕ್ರಿಯಗೊಳಿಸುವುದು ಅಥವಾ ಅಲ್ಲಾಹನಿಗೆ ವಿಶೇಷಣಗಳಿಲ್ಲವೆಂದು ಹೇಳುವುದು. ಉದಾಹರಣೆಗೆ, ಜಹ್ಮಿಯ್ಯಃಗಳು ಅಲ್ಲಾಹನಿಗೆ ನಾಮ ಮತ್ತು ವಿಶೇಷಣಗಳಿರುವುದನ್ನು ನಿರಾಕರಿಸಿದ್ದರು.

**ಮೂರು: ಸರಿಸಮಾನವನ್ನಾಗಿ ಮಾಡುವುದರಲ್ಲಿರುವ ಶಿರ್ಕ್ (شِرْكُ الأَنْدَاد):**

ಅಂದರೆ ಅಲ್ಲಾಹನಿಗಿರುವ ವಿಶೇಷಣಗಳನ್ನು ಸೃಷ್ಟಿಗಳಿಗೆ ನೀಡುವುದು. ಅಂದರೆ ಅಲ್ಲಾಹು ಕಾಣುವಂತೆಯೇ ಶೈಖ್ ಜೀಲಾನಿಯವರೂ ಕಾಣುತ್ತಾರೆ, ಅಲ್ಲಾಹು ಕೋಪಿಸಿಕೊಳ್ಳುವಂತೆಯೇ ಶೈಖ್ ಜೀಲಾನಿಯವರೂ ಕೋಪಿಸಿಕೊಳ್ಳುತ್ತಾರೆಂದು ಹೇಳುವುದು.

## ♦ ಮುಸ್ಲಿಮ್ ಸಮಾಜದಲ್ಲಿ ವ್ಯಾಪಕವಾಗಿ ಕಂಡು ಬರುವ ಕೆಲವು ಶಿರ್ಕ್‌ಗಳು:

## 1. ಗೋರಿಯಾರಾಧನೆ:

ಗೋರಿಯಾರಾಧನೆಯು ಇಂದು ಮುಸ್ಲಿಮ್ ಸಮಾಜದಲ್ಲಿ ವ್ಯಾಪಕವಾಗಿ ಹಬ್ಬಿಕೊಂಡಿರುವ ಒಂದು ಪಿಡುಗಾಗಿದೆ. ಬಹಳ ಅಪರೂಪವಾಗಿಯೇ ಹೊರತು ದರ್ಗಾಗಳಿಲ್ಲದ ಒಂದು ಊರನ್ನು ಕಾಣಲು ಸಾಧ್ಯವಿಲ್ಲ. ಕೆಲವೊಂದು ಊರುಗಳಲ್ಲಿ ಒಂದಕ್ಕಿಂತಲೂ ಹೆಚ್ಚು ದರ್ಗಾಗಳಿವೆ.

ದರ್ಗಾಗಳನ್ನು ಸಂದರ್ಶಿಸುವ ವ್ಯಕ್ತಿ ಗೋರಿಯಲ್ಲಿರುವ ವ್ಯಕ್ತಿಯೊಂದಿಗೆ ಪ್ರಾರ್ಥಿಸುವುದು, ಸಹಾಯ ಯಾಚನೆ ಮಾಡುವುದು, ಬಲಿ ಹರಕೆಗಳನ್ನು ಸಲ್ಲಿಸುವುದು ಇತ್ಯಾದಿಗಳನ್ನು ಮಾಡುವುದಾದರೆ ಅದು ಹಿರಿಯ ಶಿರ್ಕ್ ಆಗಿದೆ. ಅದೇ ರೀತಿ ಗೋರಿಯಲ್ಲಿರುವ ವ್ಯಕ್ತಿಯ ಸಾಮೀಪ್ಯವನ್ನು ಪಡೆಯುವುದಕ್ಕಾಗಿ ಅವರಲ್ಲಿ ಪ್ರಾರ್ಥಿಸುವುದು, ಅವರಿಗೆ ಸುಜೂದ್ ಮಾಡುವುದು, ಬಲಿ ಹರಕೆಗಳನ್ನು ಸಲ್ಲಿಸುವುದು, ಇತ್ಯಾದಿಗಳನ್ನು ಮಾಡಿದರೂ ಅದು ಹಿರಿಯ ಶಿರ್ಕ್ ಆಗಿದೆ. ಅದೇ ರೀತಿ ತನ್ನಿಂದ ಕೆಡುಕನ್ನು ದೂರೀಕರಿಸಲು ಮತ್ತು ತನಗೆ ಒಳಿತನ್ನು ನೀಡಲು ಗೋರಿಯಲ್ಲಿರುವ ವ್ಯಕ್ತಿಗೆ ಸಾಮರ್ಥ್ಯವಿದೆ ಎಂಬ ನಂಬಿಕೆಯು ಹಿರಿಯ ಶಿರ್ಕ್ ಆಗಿದೆ. ಯಾಕೆಂದರೆ ಇವೆಲ್ಲವೂ ಅವರಿಗಿರುವ ಇಬಾದತ್‌ಗಳಾಗಿವೆ.

ಅಲ್ಲಾಹು ಹೇಳುತ್ತಾನೆ:

﴿ وَيَعْبُدُونَ مِنْ دُونِ اللَّهِ مَا لَا يَضُرُّهُمْ وَلَا يَنْفَعُهُمْ وَيَقُولُونَ هَؤُلَاءِ شُفَعَاؤُنَا عِنْدَ اللَّهِ قُلْ أَتُنَبِّئُونَ اللَّهَ بِمَا لَا يَعْلَمُ فِي السَّمَاوَاتِ وَلَا فِي الْأَرْضِ سُبْحَانَهُ وَتَعَالَى عَمَّا يُشْرِكُونَ ﴾

**"ಅವರು ಅಲ್ಲಾಹನ ಹೊರತು ತಮಗೆ ಯಾವುದೇ ಹಾನಿಯನ್ನೋ ಲಾಭವನ್ನೋ ಮಾಡದವರನ್ನು ಆರಾಧಿಸುತ್ತಾರೆ, ಮತ್ತು ಅವರು ಹೇಳುತ್ತಾರೆ: ಇವರು ಅಲ್ಲಾಹನ ಬಳಿ ನಮಗೆ ಶಫಾಅತ್ ಮಾಡುವವರಾಗಿದ್ದಾರೆ. (ಓ ಪ್ರವಾದಿಯವರೇ) ಹೇಳಿರಿ: ಆಕಾಶಗಳಲ್ಲಾಗಲಿ, ಭೂಮಿಯಲ್ಲಾಗಲಿ ಅಲ್ಲಾಹು ಅರಿತಿರದವುಗಳನ್ನು ನೀವು ಅವನಿಗೆ ತಿಳಿಸಿಕೊಡುತ್ತಿರುವಿರಾ? ಅವರು ಮಾಡುವ ಶಿರ್ಕ್‌ನಿಂದ ಅಲ್ಲಾಹು ಅತ್ಯುನ್ನತನೂ ಪರಮ ಪಾವನನೂ ಆಗಿದ್ದಾನೆ." [ಕುರ್‌ಆನ್ 10:18]**

ಪ್ರವಾದಿ(ﷺ)ರವರು ಇಬ್ನ್ ಅಬ್ಬಾಸ್(رضي الله عنه)ರೊಂದಿಗೆ ಹೇಳುತ್ತಾರೆ:

«يَا غُلَامُ، إِنِّي أُعَلِّمُكَ كَلِمَاتٍ: احْفَظِ اللَّهَ يَحْفَظْكَ، احْفَظِ اللَّهَ تَجِدْهُ تُجَاهَكَ، إِذَا سَأَلْتَ فَاسْأَلِ اللَّهَ، وَإِذَا اسْتَعَنْتَ فَاسْتَعِنْ بِاللَّهِ، وَاعْلَمْ أَنَّ الْأُمَّةَ لَوِ اجْتَمَعَتْ عَلَى أَنْ يَنْفَعُوكَ بِشَيْءٍ لَمْ يَنْفَعُوكَ إِلَّا بِشَيْءٍ قَدْ كَتَبَهُ اللَّهُ لَكَ، وَإِنِ اجْتَمَعُوا عَلَى أَنْ يَضُرُّوكَ بِشَيْءٍ لَمْ يَضُرُّوكَ إِلَّا بِشَيْءٍ قَدْ كَتَبَهُ اللَّهُ عَلَيْكَ، رُفِعَتِ الْأَقْلَامُ وَجَفَّتِ الصُّحُفُ».

**“ಓ ಮಗೂ, ನಾನು ನಿನಗೆ ಕೆಲವು ವಚನಗಳನ್ನು ಕಲಿಸಿಕೊಡುತ್ತೇನೆ: ಅಲ್ಲಾಹನ ಬಗ್ಗೆ ಎಚ್ಚರವಹಿಸು, ಹಾಗಾದರೆ ಅವನು ನಿನ್ನನ್ನು ಸಂರಕ್ಷಿಸುವನು. ಅಲ್ಲಾಹನ ಬಗ್ಗೆ ಎಚ್ಚರವಹಿಸು, ಹಾಗಾದರೆ ನೀನು ಅವನನ್ನು ನಿನ್ನ ಮುಂಭಾಗದಲ್ಲಿ ಕಾಣುವೆ. ನೀನು ಬೇಡುವುದಾದರೆ ಅಲ್ಲಾಹನೊಂದಿಗೆ ಬೇಡು. ನೀನು ಸಹಾಯ ಯಾಚನೆ ಮಾಡುವುದಾದರೆ ಅಲ್ಲಾಹನೊಂದಿಗೆ ಸಹಾಯ ಯಾಚನೆ ಮಾಡು. ಅರಿತುಕೋ, ಯಾವುದಾದರೊಂದು ವಿಷಯದಲ್ಲಿ ನಿನಗೆ ಲಾಭವನ್ನುಂಟು ಮಾಡಬೇಕೆಂಬ ಉದ್ದೇಶದಿಂದ ಸಂಪೂರ್ಣ ಸಮುದಾಯವು ಒಟ್ಟುಗೂಡಿದರೂ ಅಲ್ಲಾಹು ನಿನ್ನ ಪರವಾಗಿ ಈಗಾಗಲೇ ಏನನ್ನು ದಾಖಲಿಸಿದ್ದಾನೋ ಅದರ ಹೊರತು ಬೇರಾವ ವಿಷಯದಲ್ಲೂ ಲಾಭವನ್ನುಂಟು ಮಾಡಲು ಅವರಿಗೆ ಸಾಧ್ಯವಿಲ್ಲ. ಯಾವುದಾದರೊಂದು ವಿಷಯದಲ್ಲಿ ನಿನಗೆ ಹಾನಿಯನ್ನುಂಟು ಮಾಡಬೇಕೆಂಬ ಉದ್ದೇಶದಿಂದ ಅವರೆಲ್ಲರೂ ಒಟ್ಟುಗೂಡಿದರೂ ಸಹ ಅಲ್ಲಾಹು ನಿನ್ನ ವಿರುದ್ಧವಾಗಿ ಈಗಾಗಲೇ ಏನನ್ನು ದಾಖಲಿಸಿದ್ದಾನೋ ಅದರ ಹೊರತು ಬೇರಾವ ವಿಷಯದಲ್ಲೂ ಹಾನಿಯನ್ನುಂಟು ಮಾಡಲು ಅವರಿಗೆ ಸಾಧ್ಯವಿಲ್ಲ. ಲೇಖನಿಗಳನ್ನು ಎತ್ತಲಾಗಿದೆ ಮತ್ತು ಗ್ರಂಥಗಳು ಒಣಗಿವೆ.” [ಅತ್ತಿರ್ಮಿದಿ, ಅಹ್ಮದ್]**

ಕುದ್ಸೀಯಾದ ಹದೀಸೊಂದರಲ್ಲಿ ಅಲ್ಲಾಹು ಹೇಳುತ್ತಾನೆ:

«أَنَا أَغْنَى الشُّرَكَاءِ عَنِ الشِّرْكِ، مَنْ عَمِلَ عَمَلًا أَشْرَكَ فِيهِ مَعِي غَيْرِي تَرَكْتُهُ وَشِرْكَهُ».

**“ಸಹಭಾಗಿತ್ವ ಮಾಡುವ ವಿಷಯದಲ್ಲಿ ಯಾವುದೇ ಸಹಭಾಗಿಗಳ ಅಗತ್ಯವು ನನಗಿಲ್ಲ. ಯಾರಾದರೂ ಒಂದು ಕರ್ಮವನ್ನು ಮಾಡಿ ಅದರಲ್ಲಿ ನನ್ನೊಂದಿಗೆ ಬೇರೊಬ್ಬರನ್ನು ಸಹಭಾಗಿಯನ್ನಾಗಿ ಮಾಡುವುದಾದರೆ ಅವನನ್ನು ಮತ್ತು ಅವನ ಸಹಭಾಗಿತ್ವವನ್ನು ನಾನು ತೊರೆದು ಬಿಡುವೆನು.” [ಮುಸ್ಲಿಮ್]**

## 2. ಅಲ್ಲಾಹೇತರರ ಮೇಲೆ ಆಣೆ ಹಾಕುವುದು:

ಅಲ್ಲಾಹೇತರರ ಮೇಲೆ ಆಣೆ ಹಾಕಲು ಅಥವಾ ಪ್ರತಿಜ್ಞೆ ಮಾಡಲು ಮುಸ್ಲಿಮನಿಗೆ ಅನುಮತಿಯಿಲ್ಲ. ಅದು ಪ್ರವಾದಿಗಳ ಮೇಲಾಗಿರಲಿ, ಅಥವಾ ಔಲಿಯಾಗಳ ಮೇಲಾಗಿರಲಿ, ಕಅ್‌ಬಾದ ಮೇಲಾಗಿರಲಿ, ಅಥವಾ ದರ್ಗಾದ ಮೇಲಾಗಿರಲಿ, ತಂದೆಯ ಮೇಲಾಗಿರಲಿ, ಅಥವಾ ತಾಯಿಯ ಮೇಲಾಗಿರಲಿ, ಅನುಗ್ರಹದ ಮೇಲಾಗಿರಲಿ, ಅಥವಾ ವಿಶ್ವಾಸಾರ್ಹತೆಯ ಮೇಲಾಗಿರಲಿ ಯಾವುದರ ಮೇಲೂ ಆಣೆ ಹಾಕಲು ಅನುಮತಿಯಿಲ್ಲ.

ಇಬ್ನ್ ಉಮರ್(﵁)ರಿಂದ ವರದಿಯಾದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

«أَلَا إِنَّ اللهَ يَنْهَاكُمْ أَنْ تَحْلِفُوا بِآبَائِكُمْ، فَمَنْ كَانَ حَالِفًا فَلْيَحْلِفْ بِاللَّهِ أَوْ لِيَصْمُتْ».

**"ಅರಿತುಕೊಳ್ಳಿರಿ, ಖಂಡಿತವಾಗಿಯೂ ನಿಮ್ಮ ತಂದೆಯಂದಿರ ಮೇಲೆ ಆಣೆ ಹಾಕುವುದನ್ನು ಅಲ್ಲಾಹು ನಿಮಗೆ ವಿರೋಧಿಸಿದ್ದಾನೆ. ಆದ್ದರಿಂದ ಯಾರಾದರೂ ಆಣೆ ಹಾಕುವುದಾದರೆ ಅವನು ಅಲ್ಲಾಹನ ಮೇಲೆ ಆಣೆ ಹಾಕಲಿ ಅಥವಾ ಮೌನವಾಗಿರಲಿ." [ಅಲ್‌ಬುಖಾರೀ ಮತ್ತು ಮುಸ್ಲಿಮ್]**

ಅಬೂ ದಾವೂದ್ ವರದಿ ಮಾಡಿದ ಹದೀಸಿನಲ್ಲಿ ಹೀಗಿದೆ:

«مَنْ حَلَفَ بِالْأَمَانَةِ فَلَيْسَ مِنَّا».

**"ಯಾರಾದರೂ ವಿಶ್ವಾಸಾರ್ಹತೆಯ ಮೇಲೆ ಆಣೆ ಹಾಕಿದರೆ ಅವನು ನಮ್ಮಲ್ಲಿ ಸೇರಿದವನಲ್ಲ." [ಅಬೂ ದಾವೂದ್]**

ಇನ್ನು ಯಾರಾದರೂ ಅಜ್ಞಾನಪೂರ್ವಕವಾಗಿ ಅಥವಾ ಪ್ರಮಾದಪೂರ್ವಕವಾಗಿ ಅಲ್ಲಾಹೇತರರ ಮೇಲೆ ಆಣೆ ಹಾಕಿದರೆ ಅವನು 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳಬೇಕಾಗಿದೆ.

ಪ್ರವಾದಿ(ﷺ)ರವರು ಹೇಳುತ್ತಾರೆ:

«مَنْ حَلَفَ فَقَالَ فِي حَلِفِهِ: بِاللَّاتِ وَالْعُزَّى، فَلْيَقُلْ: لَا إِلَهَ إِلَّا اللَّهُ».

**"ಯಾರಾದರೂ ಆಣೆ ಹಾಕುವಾಗ ತನ್ನ ಆಣೆಯಲ್ಲಿ: ಲಾತ್‌ನ ಮೇಲಾಣೆ, ಉಝ್ಝಾನ ಮೇಲಾಣೆ ಎಂದು ಹೇಳಿದ್ದರೆ, ಅವನು 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳಲಿ." [ಅಲ್‌ಬುಖಾರೀ]**

ಅಲ್ಲಾಹೇತರರ ಮೇಲೆ ಆಣೆ ಹಾಕುವುದನ್ನು ಸಹಾಬಾಗಳು ಗಂಭೀರವಾಗಿ ಪರಿಗಣಿಸುತ್ತಿದ್ದರು. ಅಬ್ದುಲ್ಲಾಹ್ ಇಬ್ನ್ ಮಸ್‌ಊದ್(ﷺ)ರವರು ಹೇಳುತ್ತಾರೆ:

لِأَنْ أَحْلِفَ بِاللَّهِ كَاذِبًا أَحَبُّ إِلَيَّ مِنْ أَنْ أَحْلِفَ بِغَيْرِهِ صَادِقًا.

**"ಅಲ್ಲಾಹನ ಮೇಲೆ ಸುಳ್ಳು ಆಣೆ ಹಾಕುವುದು ಅಲ್ಲಾಹೇತರರ ಮೇಲೆ ಸತ್ಯ ಆಣೆ ಹಾಕುವುದಕ್ಕಿಂತಲೂ ನನಗೆ ಹೆಚ್ಚು ಇಷ್ಟಕರವಾಗಿದೆ." [ಅಬ್ದುರ್ರಝ್ಝಾಕ್, ಇಬ್ನ್ ಅಬೀ ಶೈಬಾ]**

ಇದರ ಅರ್ಥ ಅಲ್ಲಾಹನ ಮೇಲೆ ಸುಳ್ಳು ಆಣೆ ಹಾಕಬಹುದೆಂದಲ್ಲ. ಬದಲಾಗಿ ಅಲ್ಲಾಹನ ಮೇಲೆ ಸುಳ್ಳು ಆಣೆ ಹಾಕುವುದು ಒಂದು ಅಪರಾಧ ಮಾತ್ರವಾಗಿದೆ. ಆದರೆ ಅಲ್ಲಾಹೇತರರ ಮೇಲೆ ಆಣೆ ಹಾಕುವುದು ಘೋರ ಅಪರಾಧವಾಗಿದೆ. ಅದು

ಮಹಾಪಾಪಗಳಲ್ಲಿ ಸೇರಿದ ಶಿರ್ಕ್ ಆಗಿದೆಯೆಂದು ಸಹಾಬಿವರ್ಯರು ಇಲ್ಲಿ ಕಲಿಸಿ ಕೊಡುತ್ತಿದ್ದಾರೆ.

### 3. ತಾಯಿತಗಳನ್ನು ಕಟ್ಟುವುದು:

ತಾಯಿತಗಳನ್ನು ಅರಬಿಯಲ್ಲಿ 'ತಮೀಮಃ' ಎನ್ನಲಾಗುತ್ತದೆ. ಅರಬರು ತಮ್ಮ ಮಕ್ಕಳಿಗೆ ಇವುಗಳನ್ನು ಕಟ್ಟುತ್ತಿದ್ದರು. ಇದು ಕೇಡುಕನ್ನು ನಿವಾರಿಸುತ್ತದೆ, ಜಿನ್ನ್‌ಗಳ ಉಪದ್ರವವನ್ನು ದೂರೀಕರಿಸುತ್ತದೆ, ದೃಷ್ಟಿ ಬೀಳುವುದನ್ನು ತಡೆಯುತ್ತದೆ ಎಂಬಿತ್ಯಾದಿ ವಿಶ್ವಾಸಗಳು ಅವರಲ್ಲಿತ್ತು. ತಾಯಿತಗಳನ್ನು ಕಟ್ಟುವುದು ಶಿರ್ಕ್ ಆಗಿದೆ. ಪ್ರವಾದಿ(ﷺ)ರವರು ಹೇಳಿದರು:

«مَنْ تَعَلَّقَ تَمِيمَةً فَقَدْ كَفَرَ».

**"ಯಾರಾದರೂ ತಾಯಿತಗಳನ್ನು ಕಟ್ಟಿದರೆ ಅವನು ಶಿರ್ಕ್ ಮಾಡಿದನು." [ಮುಸ್ಲಿಮ್, ಅಬೂ ದಾವೂದ್]**

ಆದರೆ ತಾಯಿತದಲ್ಲಿ ಕುರ್‌ಆನ್‌ನ ಆಯತ್‌ಗಳು ಮಾತ್ರವಿರುವುದಾದರೆ ಅದನ್ನು ಕಟ್ಟಬಹುದೇ? ಈ ವಿಷಯದಲ್ಲಿ ವಿದ್ವಾಂಸರಿಗೆ ಎರಡು ಅಭಿಪ್ರಾಯಗಳಿವೆ. 'ಫತ್‌ಹುಲ್ ಮಜೀದ್ ಫೀ ಶರ್ಹಿ ಕಿತಾಬಿ ತೌಹೀದ್' ಎಂಬ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ:

**"ಈ ವಿಷಯದಲ್ಲಿ ಸಲಫ್‌ಗಳು ಭಿನ್ನಾಭಿಪ್ರಾಯ ಹೊಂದಿದ್ದಾರೆ. ಅವರಲ್ಲಿ ಕೆಲವರು ಇದಕ್ಕೆ ರಿಯಾಯಿತಿ ನೀಡಿದ್ದಾರೆ ಮತ್ತು ಕೆಲವರು ಇದನ್ನು ವಿರೋಧಿಸಿದ್ದಾರೆ. ಸತ್ಯಕ್ಕೆ ಹೆಚ್ಚು ಹತ್ತಿರದಲ್ಲಿರುವ ಅಭಿಪ್ರಾಯವು ಇದನ್ನು ವಿರೋಧಿಸಬೇಕು ಎಂಬುದಾಗಿದೆ. ಯಾಕೆಂದರೆ:**

**1. ಪ್ರವಾದಿ(ﷺ)ರವರು ತಾಯಿತಗಳಲ್ಲಿ ಯಾವುದನ್ನೂ ಹೊರತುಪಡಿಸದೆ ಮೊತ್ತವಾಗಿ ಶಿರ್ಕ್ ಎಂದಿದ್ದಾರೆ.**

**2. ಮಾಧ್ಯಮವನ್ನು ಮುಚ್ಚುವುದು. ಯಾಕೆಂದರೆ ಕುರ್‌ಆನ್ ಆಯತ್‌ಗಳನ್ನು ಕಟ್ಟಲು ಅನುಮತಿ ನೀಡಿದರೆ ಅದು ಕುರ್‌ಆನ್ ಅಲ್ಲದವುಗಳನ್ನೂ ಕಟ್ಟುವ ಕಡೆಗೆ ಕೊಂಡೊಯ್ಯುತ್ತದೆ. ಆದ್ದರಿಂದ ಇದು ಶಿರ್ಕ್‌ನೆಡೆಗೆ ಕೊಂಡೊಯ್ಯುವ ಮಾಧ್ಯಮವಾಗಿ ರುವುದರಿಂದ ಇದನ್ನು ಮುಚ್ಚುವುದು ಅನಿವಾರ್ಯವಾಗಿದೆ.**

**3. ಇದು ಅಲ್ಲಾಹನ ವಚನಗಳಿಗೆ ತೋರಿಸುವ ಅಗೌರವವಾಗಿದೆ. ಯಾಕೆಂದರೆ ಈ ತಾಯಿತವನ್ನು ಕಟ್ಟಿದವನು ಅದರೊಂದಿಗೆ ಶೌಚಾಲಯ ಮೊದಲಾದ ಹೊಲಸು ಸ್ಥಳಗಳನ್ನು ಪ್ರವೇಶಿಸುತ್ತಾನೆ."**

ಒಟ್ಟಿನಲ್ಲಿ, ತಾಯಿತಗಳನ್ನು ಅನಿರ್ಬಂಧಿತವಾಗಿ ವಿರೋಧಿಸಬೇಕೆಂಬುದು ಸರಿಯಾದ ಅಭಿಪ್ರಾಯವಾಗಿದೆ.

## 4. ಮಂತ್ರ:

ಮಂತ್ರಗಳೆಲ್ಲವೂ ಶಿರ್ಕ್ ಅಲ್ಲ. ಅವುಗಳಲ್ಲಿ ಶಿರ್ಕ್ ಆಗಿರುವಂತದ್ದು ಇದೆ. ಹಾಗೆಯೇ ಶಿರ್ಕ್ ಅಲ್ಲದವುಗಳೂ ಇವೆ. ಶಿರ್ಕ್ ಆಗಿರುವಂತಹ ಮಂತ್ರಗಳನ್ನು ಮಂತ್ರಿಸಬಾರದು. ಅದು ನಿಷಿದ್ಧವಾಗಿದೆ. ಮಾತ್ರವಲ್ಲ, ಅದು ಶಿರ್ಕ್ ಕೂಡ ಆಗಿದೆ. ಆದರೆ ಶಿರ್ಕ್ ಅಲ್ಲದಂತಹ ಮಂತ್ರಗಳನ್ನು, ಅಂದರೆ ಕುರ್‌ಆನ್ ವಚನಗಳ ಮೂಲಕ ಮತ್ತು ಹದೀಸ್‌ಗಳಲ್ಲಿ ಬಂದಿರುವ ಪ್ರಾರ್ಥನೆಗಳ ಮೂಲಕ ಮಂತ್ರಿಸುವುದಾದರೆ ಅದಕ್ಕೆ ಅನುಮತಿಯಿದೆ. ಮಾತ್ರವಲ್ಲ, ಅದು ಧರ್ಮದಲ್ಲಿ ಒಳಪಟ್ಟದ್ದೂ ಆಗಿದೆ. ಔಫ್ ಇಬ್ನ್ ಮಾಲಿಕ್(ﷺ)ರವರು ಹೇಳುತ್ತಾರೆ:

**"ನಾವು ಜಾಹಿಲಿಯ್ಯತ್‌ನಲ್ಲಿರುವಾಗ ಮಂತ್ರಿಸುತ್ತಿದ್ದೆವು. ಆದ್ದರಿಂದ ನಾವು ಪ್ರವಾದಿ(ﷺ)ರವರೊಂದಿಗೆ ಓ ಅಲ್ಲಾಹನ ರಸೂಲರೇ, ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಎಂದು ಕೇಳಿದೆವು. ಆಗ ಪ್ರವಾದಿ(ﷺ)ರವರು ಹೇಳಿದರು:**

«اعْرِضُوا عَلَيَّ رُقَاكُمْ، لَا بَأْسَ بِالرُّقَى مَا لَمْ تَكُنْ شِرْكًا».

**"ನಿಮ್ಮ ಮಂತ್ರಗಳನ್ನು ನನಗೆ ತೋರಿಸಿರಿ. ಶಿರ್ಕ್ ಅಲ್ಲದ ಮಂತ್ರಗಳನ್ನು ಮಂತ್ರಿಸುವುದರಲ್ಲಿ ತೊಂದರೆಯಿಲ್ಲ."** [ಮುಸ್ಲಿಮ್]

ಮಂತ್ರವು ತಗಡು, ತಾಯಿತ ಹಾಗೂ ಅರ್ಥವಾಗದ ಮಾತುಗಳನ್ನು ಹೊಂದಿದ್ದರೆ ಅದು ಶಿರ್ಕ್ ಆಗಿದೆ. ಇದಕ್ಕಿರುವ ಕೆಲವು ಉದಾಹರಣೆಗಳು ಹೀಗಿವೆ:

'ಅರ್ರಹ್ಮತು ಫಿ ತ್ತಿಬ್ಬಿ ವಲ್‌ಹಿಕ್ಮ:' ಎಂಬ ಗ್ರಂಥದಲ್ಲಿ 'ರಮದುಲ್ ಐನ್' (ಕಣ್ಣಿನ ಉರಿಯೂತ)ಗಿರುವ ಚಿಕಿತ್ಸೆಯನ್ನು ಹೀಗೆ ಹೇಳಲಾಗಿದೆ:

يُؤْخَذُ دَمُ الْحَائِضِ الَّتِي لَمْ يَمُسَّهَا رَجُلٌ وَيُخْلَطُ مَعَ الْمَنِيِّ، وَيُكْتَحَلُ بِهِ، فَإِنَّهُ يَقْطَعُ الْبَيَاضَ مِنَ الْعَيْنِ.

**"ಪುರುಷನು ಸ್ಪರ್ಶಿಸದ (ಸಂಭೋಗ ಮಾಡದ) ಸ್ತ್ರೀಯ ಋತುಸ್ರಾವದ ರಕ್ತವನ್ನು ತೆಗೆದು ಅದಕ್ಕೆ ವೀರ್ಯವನ್ನು ಮಿಶ್ರ ಮಾಡಿ ಕಣ್ಣಿಗೆ ಕಾಡಿಗೆಯಂತೆ ಹಚ್ಚಬೇಕು. ಇದು ಕಣ್ಣಿನ ಬಿಳಿದ್ರವವನ್ನು ನಿವಾರಿಸುತ್ತದೆ."**

ಅದೇ ರೀತಿ ಅಂಧತ್ವ ನಿವಾರಣೆಗಿರುವ ಮಂತ್ರವನ್ನು ಹೀಗೆ ಹೇಳಲಾಗಿದೆ:

عَزَمْتُ عَلَيْكِ أَيَّتُهَا الْعَيْنُ بِحَقِّ شرا هيا براهيا ادنواى أصاؤت أل شداي. عَزَمْتُ عَلَيْكِ أَيَّتُهَا الْعَيْنُ بِحَقِّ شهت بهت أشهت باقسطاع ألحا. أَخْرِجِي نَظَرَةَ السُّوءِ كَمَا خَرَجَ يُوسُفُ مِنَ الْمُضَيِّقِ، وَجُعِلَ لِمُوسَى فِي الْبَحْرِ طَرِيقٌ...

**"ಶರಾ ಬರಾಯಾ ಅದ್ನಾವಾಯ ಅಸಾಉತು ಅಲ್ ಶದ್ದಾಯ ದ ಹಕ್ಕ್‌ನಿಂದ ಓ ಕಣ್ಣೇ ನಾನು ನಿನಗೆ ಮಂತ್ರಿಸುತ್ತಿದ್ದೇನೆ. ಶಹತ್ ಬಹತ್ ಅಶಹತ್ ಬಾಕಿಸ್ತಾಅ ಅಲ್‌ಹಾ ದ ಹಕ್ಕ್‌ನಿಂದ ಓ ಕಣ್ಣೇ ನಾನು ನಿನಗೆ ಮಂತ್ರಿಸುತ್ತಿದ್ದೇನೆ. ಯೂಸುಫ್‌ರವರು ಸಂಕಷ್ಟದಿಂದ ಪಾರಾದಂತೆ, ಮೂಸಾರವರಿಗೆ ಸಮುದ್ರದಲ್ಲಿ ದಾರಿಯನ್ನು ಮಾಡಿಕೊಡಲಾದಂತೆ ಓ ಕಣ್ಣೇ ನಿನ್ನಲ್ಲಿರುವ ಕೆಟ್ಟ ದೃಷ್ಟಿಯನ್ನು ಹೊರಹಾಕು."**

ಅದೇ ರೀತಿ ಸಂಭೋಗ ಶಕ್ತಿ ವೃದ್ಧಿಯಾಗುವುದಕ್ಕಿರುವ ಮಂತ್ರವನ್ನು ಹೀಗೆ ಹೇಳಲಾಗಿದೆ:

تَكْتُبُ فِي وَرَقَةٍ بِقَلَمِ نُحَاسٍ وَتَجْعَلُهُ تَحْتَ لِسَانِكَ وَقْتَ الْجِمَاعِ، وَهَذَا مَا تَكْتُبُ:
**9169111911156918693111181145**

**"ತಾಮ್ರದ ಲೇಖನಿಯಿಂದ ಒಂದು ಕಾಗದದ ಚೂರಿನಲ್ಲಿ 9169111911156918693111181145 ಎಂಬ ಸಂಖ್ಯೆಯನ್ನು ಬರೆದು ಅದನ್ನು ಸಂಭೋಗದ ಸಮಯದಲ್ಲಿ ನಿನ್ನ ನಾಲಗೆಯ ಕೆಳಗಿಡಬೇಕು."**

ಇಂತಹ ಶೈತಾನೀ ಚಿಕಿತ್ಸೆಗಳು ಮತ್ತು ಮಂತ್ರಗಳು ನಿಷಿದ್ಧವಾಗಿವೆ. ಮಾತ್ರವಲ್ಲ, ಇವುಗಳಲ್ಲಿ ಕೆಲವು ಶಿರ್ಕ್ ಕೂಡ ಆಗಿವೆ. ಇಂತಹ ಗ್ರಂಥಗಳ ಬಗ್ಗೆ ಮತ್ತು ಅವುಗಳಲ್ಲಿರುವ ಮಂತ್ರ ಹಾಗೂ ಚಿಕಿತ್ಸೆಗಳ ಬಗ್ಗೆ ಶೈಖ್ ಅಬ್ದುಸ್ಸಲಾಮ್ ಮುಹಮ್ಮದ್ ತಮ್ಮ 'ಅಸ್ಸುನನು ವಲ್‌ಮುಬ್ತದಿಆತ್' ಎಂಬ ಗ್ರಂಥದಲ್ಲಿ (ಪುಟ 295–296) ಹೇಳುತ್ತಾರೆ:

**"ಯಾರಾದರೂ ಇವುಗಳಲ್ಲಿರುವ ಪ್ರಕಾರ ಮಾಡಿದರೆ ಅವನಿಗಿಂತಲೂ ದೊಡ್ಡ ಅಜ್ಞಾನಿ ಭೂಮಿಯಲ್ಲಿ ಯಾರೂ ಇರಲಾರರು. ಯಾರು ಇಂತಹ ಗ್ರಂಥಗಳನ್ನು ಸುಟ್ಟು ಹಾಕುವುದಿಲ್ಲವೋ ಅವನು ಸ್ವತಃ ಅಜ್ಞಾನದ ಅಗ್ನಿಯಲ್ಲಿ ಸುಟ್ಟು ಹೋಗುವನು. ಇದರ ನಂತರ ಪರಲೋಕದಲ್ಲಿ ಇದಕ್ಕಿರುವ ಶಿಕ್ಷೆಯಾಗಿ ನರಕಾಗ್ನಿಯು ಅವನನ್ನು ಕಾಯುತ್ತಿರುವುದು. ಅದು ಅತಿ ನಿಕೃಷ್ಟ ವಾಸಸ್ಥಳವಾಗಿದೆ."**

ಅದೇ ರೀತಿ ಹಾ ಹೂ ಹೀ ಮೊದಲಾದ ಮಂತ್ರಗಳು ಮತ್ತು ಜಾಹಿಲೀ ಕಾಲದ ಚಿಕಿತ್ಸೆಗಳಿಂದ ದೂರವಿರುವುದು ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ. ಯಾಕೆಂದರೆ ಇಂತಹ ಚಿಕಿತ್ಸೆಗಳಲ್ಲಿ ಹೆಚ್ಚಿನವುಗಳೂ ಜಿನ್ನ್‌ಗಳಲ್ಲಿರುವ ಶೈತಾನರ ಸಹಾಯವನ್ನು ಪಡೆದು ಮಾಡುವ ಚಿಕಿತ್ಸೆಗಳಾಗಿವೆ.

ಒಮ್ಮೆ ಇಬ್ನ್ ಮಸ್‌ಊದ್‌ರವರು ತಮ್ಮ ಪತ್ನಿಯ ಕೊರಳಲ್ಲಿ ಒಂದು ದಾರವನ್ನು ಕಂಡಾಗ ಅವರು ಕೇಳಿದರು: **"ಇದೇನು?"**

ಆಕೆ ಉತ್ತರಿಸಿದರು:

خَيْطٌ رُقِيَ لِي فِيهِ مِنَ الْحُمَّى

**"ಇದು ಜ್ವರ ನಿವಾರಣೆಗಾಗಿ ಮಂತ್ರಿಸಲಾದ ಒಂದು ದಾರವಾಗಿದೆ."** ಇಬ್ನ್ ಮಸ್‌ಊದ್(ﷺ)ರವರು ತಕ್ಷಣ ಅದನ್ನು ಎಳೆದು ತುಂಡು ಮಾಡಿ ಎಸೆದು ಹೇಳಿದರು:

لَقَدْ أَصْبَحَ آلُ عَبْدِ اللَّهِ أَغْنِيَاءَ عَنِ الشِّرْكِ، سَمِعْتُ رَسُولُ اللَّهِ ﷺ يَقُولُ: «إِنَّ الرُّقَى وَالتَّمَائِمَ وَالتِّوَلَةَ شِرْكٌ».

**"ಅಬ್ದುಲ್ಲಾಹ್ ಇಬ್ನ್ ಮಸ್‌ಊದ್(ﷺ)ರವರ ಕುಟುಂಬವು ಶಿರ್ಕ್‌ನ ಅಗತ್ಯವಿಲ್ಲ ದವರಾಗಿದ್ದಾರೆ. ಅಲ್ಲಾಹನ ರಸೂಲ್(ﷺ)ರವರು ಹೇಳುವುದಾಗಿ ನಾನು ಆಲಿಸಿದ್ದೇನೆ: "ಖಂಡಿತವಾಗಿಯೂ ಮಂತ್ರ, ತಾಯಿತಗಳು ಮತ್ತು ತಿವ್ಲತ್ ಶಿರ್ಕ್ ಆಗಿದೆ."**

ಆಗ ಆಕೆ ಹೇಳಿದರು:

لَقَدْ كَانَتْ عَيْنِي تَقْذِفُ، وَكُنْتُ أَخْتَلِفُ إِلَى فُلَانٍ الْيَهُودِيِّ، فَإِذَا رَقَى سَكَنَتْ.

**"ಕೆಲವೊಮ್ಮೆ ನನ್ನ ಕಣ್ಣಿನಲ್ಲಿ ಸ್ರಾವವುಂಟಾಗುತ್ತಿತ್ತು. ಆಗ ನಾನು ಇಂತಿಂತಹ ಯಹೂದಿಯೆಡೆಗೆ ಮಂತ್ರಿಸುವುದಕ್ಕಾಗಿ ಹೋಗುತ್ತಿದ್ದೆ. ಆತ ಮಂತ್ರಿಸಿದರೆ ಅದು ಗುಣವಾಗುತ್ತಿತ್ತು."**

ಆಗ ಇಬ್ನ್ ಮಸ್‌ಊದ್(ﷺ)ರವರು ಹೇಳಿದರು:

إِنَّمَا ذَلِكَ عَمَلُ الشَّيْطَانِ كَانَ يَنْخُسُهَا بِيَدِهِ، فَإِذَا رَقَى كَفَّ عَنْهَا، إِنَّمَا كَانَ يَكْفِيكِ أَنْ تَقُولِي كَمَا كَانَ ﷺ يَقُولُ: «أَذْهِبِ الْبَأْسَ رَبَّ النَّاسِ، وَاشْفِ أَنْتَ الشَّافِي، لَا شِفَاءَ إِلَّا شِفَاؤُكَ شِفَاءً لَا يُغَادِرُ سَقَمًا».

**"ಖಂಡಿತವಾಗಿಯೂ ಅದು ಶೈತಾನನ ಕೆಲಸವಾಗಿದೆ. ಅವನು ಕಣ್ಣನ್ನು ಚುಚ್ಚುತ್ತಿರುತ್ತಾನೆ. ಮಂತ್ರಿಸಿದಾಗ ಅವನು ಚುಚ್ಚುವುದನ್ನು ನಿಲ್ಲಿಸುತ್ತಾನೆ. ಪ್ರವಾದಿ(ﷺ)ರವರು ಹೇಳುತ್ತಿದ್ದ ಈ ಮಂತ್ರವನ್ನು ಹೇಳಿದರೆ ನಿನಗೆ ಸಾಕಾಗುವುದು: ಅದ್‌ಹಿಬಿಲ್ ಬಅ್‌ಸ ರಬ್ಬನ್ನಾಸ್, ವಶ್‌ಫಿ ಅನ್ತ ಶ್ಶಾಫೀ, ಲಾ ಶಿಫಾಅ ಇಲ್ಲಾ ಶಿಫಾಉಕ, ಶಿಫಾಅನ್ ಲಾ ಯುಗಾದಿರು ಸಕಮನ್ (ಜನರ ರಬ್ಬೇ, ತೊಂದರೆಯನ್ನು ನಿವಾರಿಸು. ಗುಣಪಡಿಸು. ನೀನು**

**ಗುಣಪಡಿಸುವವನಾಗಿರುವೆ. ನಿನ್ನ ಗುಣವಲ್ಲದೆ ಬೇರೆ ಗುಣವಿಲ್ಲ. ನಿನ್ನ ಗುಣವು ಯಾವುದೇ ರೋಗವನ್ನೂ ಬಿಟ್ಟುಬಿಡುವುದಿಲ್ಲ." [ಅಹ್ಮದ್, ಅಬೂ ದಾವೂದ್]**

ಈ ಹದೀಸಿನಿಂದ ನಮಗೆ ಎರಡು ಪ್ರಯೋಜನಗಳು ಸಿಗುತ್ತವೆ. ಒಂದು: ಇಸ್ಲಾಮೇತರ ಮಂತ್ರಗಳಿಂದ ಮಂತ್ರಿಸಿದಾಗ ಗುಣವಾಗುವುದಕ್ಕೆ ಕಾರಣವು ಜಿನ್ನ್‌ಗಳಲ್ಲಿರುವ ಶೈತಾನರ ಸಹಾಯವನ್ನು ಕೇಳುವುದರಿಂದಾಗಿದೆ. ಎರಡು: ಎಲ್ಲ ಮಂತ್ರಗಳೂ ನಿಷಿದ್ಧವಲ್ಲ. ಬದಲಾಗಿ ಕುರ್‌ಆನ್ ಹಾಗೂ ಸುನ್ನತ್‌ಗೆ ವಿರುದ್ಧ ವಾಗಿರುವ ಮಂತ್ರಗಳು ಮಾತ್ರ ನಿಷಿದ್ಧವಾಗಿವೆ. ಇಬ್ನ್ ಮಸ್‌ಊದ್(ﷺ)ರವರು ಪ್ರವಾದಿ(ﷺ)ರವರು ಮಂತ್ರಿಸುತ್ತಿದ್ದರೆಂದು ಇಲ್ಲಿ ದೃಢೀಕರಿಸುತ್ತಾರೆ ಮತ್ತು ಆ ಮಂತ್ರವನ್ನು ಮಂತ್ರಿಸುವಂತೆ ತಮ್ಮ ಪತ್ನಿಗೆ ಆಜ್ಞಾಪಿಸುತ್ತಾರೆ.

'ಫತ್‌ಹುಲ್ ಮಜೀದ್ ಫೀ ಶರ್ಹಿ ಕಿತಾಬಿ ತೌಹೀದ್' ಎಂಬ ಗ್ರಂಥದಲ್ಲಿ (ಪುಟ 132) ಹೀಗೆ ಹೇಳಲಾಗಿದೆ:

**"ಅಸ್ಸುಯೂತೀ ಹೇಳುತ್ತಾರೆ: ಮೂರು ಶರತ್ತುಗಳನ್ನು ಈಡೇರಿಸುವ ಮಂತ್ರಗಳನ್ನು ಮಂತ್ರಿಸುವುದಕ್ಕೆ ಅನುಮತಿಯಿದೆ ಎಂಬ ವಿಷಯದಲ್ಲಿ ಉಲಮಾಗಳು ಒಮ್ಮತಾಭಿಪ್ರಾಯ ಹೊಂದಿದ್ದಾರೆ:**

**ಒಂದು: ಮಂತ್ರಿಸುವುದು ಅಲ್ಲಾಹನ ವಚನ (ಕುರ್‌ಆನ್) ಅಥವಾ ಅಲ್ಲಾಹನ ಹೆಸರು ಮತ್ತು ವಿಶೇಷಣಗಳಿಂದಾಗಿರಬೇಕು.**

**ಎರಡು: ಮಂತ್ರವು ಅರಬಿ ಭಾಷೆಯಲ್ಲಿರಬೇಕು ಮತ್ತು ಅದರ ಅರ್ಥವು ಅರ್ಥವಾಗು ವಂತಿರಬೇಕು.**

**ಮೂರು: ಮಂತ್ರವು ಸ್ವತಃ ಯಾವುದೇ ಪರಿಣಾಮ ಬೀರುವುದಿಲ್ಲ ಮತ್ತು ಅದು ಅಲ್ಲಾಹನ ತಕ್ದೀರ್ (ನಿರ್ಣಯ) ನಿಂದ ಮಾತ್ರ ಪರಿಣಾಮ ಬೀರುತ್ತದೆ ಎಂದು ವಿಶ್ವಾಸವಿಡುವುದು."**

## 5. ಜ್ಯೋತಿಷ್ಯರನ್ನು ಸತ್ಯಪಡಿಸುವುದು:

ಯಾರಾದರೂ ಯಾವುದಾದರೂ ವಿಷಯದ ಬಗ್ಗೆ ಕೇಳುವುದಕ್ಕಾಗಿ ಜ್ಯೋತಿಷ್ಯರ (ತಂಗಳ್, ಬಾಬಾ, ಬೀಬಿ ಮೊದಲಾದವರ) ಬಳಿಗೆ ತೆರಳಿದರೆ, ಖಂಡಿತವಾಗಿಯೂ ಅವನು ಶಿರ್ಕ್‌ನ ಬಾಗಿಲನ್ನು ಪ್ರವೇಶಿಸಿದ್ದಾನೆ. ಯಾಕೆಂದರೆ ಅವರಲ್ಲಿ ಕೇಳಲು ಹೋಗುವುದು ಅವರಿಗೆ ಅಗೋಚರ (ಗೈಬ್) ವಿಷಯಗಳನ್ನು ಅರಿಯಲು ಸಾಧ್ಯವಿದೆ ಎಂಬ ನಂಬಿಕೆಯಿಂದಾಗಿದೆ. ಇದೊಂದು ಮಹಾ ಸುಳ್ಳಾರೋಪವಾಗಿದೆ. ಯಾಕೆಂದರೆ ಅಲ್ಲಾಹು ಹೇಳುತ್ತಾನೆ:

﴿ قُلْ لَا يَعْلَمُ مَنْ فِي السَّمَاوَاتِ وَالْأَرْضِ الْغَيْبَ إِلَّا اللَّهُ وَمَا يَشْعُرُونَ أَيَّانَ يُبْعَثُونَ ﴾

**"ಹೇಳಿರಿ: ಅಲ್ಲಾಹನ ಹೊರತು ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವವರಲ್ಲಿ ಯಾರಿಗೂ ಕೂಡ ಗೈಬ್ (ಅಗೋಚರ) ವಿಷಯಗಳನ್ನು ಅರಿಯಲು ಸಾಧ್ಯವಿಲ್ಲ. ತಮ್ಮನ್ನು ಯಾವಾಗ ಪುನರ್ಜೀವಗೊಳಿಸಲಾಗುವುದೆಂಬ ಅರಿವೂ ಅವರಿಗಿಲ್ಲ." [27:65]**

ಇಂತಹವರ ಬಗ್ಗೆ ಎಚ್ಚರಿಕೆ ನೀಡುತ್ತಾ ಪ್ರವಾದಿ(ﷺ)ರವರು ಹೇಳಿದರು:

«مَنْ أَتَى عَرَّافًا فَسَأَلَهُ عَنْ شَيْءٍ لَمْ تُقْبَلْ لَهُ صَلَاةٌ أَرْبَعِينَ لَيْلَةً».

**"ಯಾರಾದರೂ ಜ್ಯೋತಿಷ್ಯರ (ತಂಗಳ್, ಬಾಬಾ, ಬೀಬಿ ಮೊದಲಾದವರ) ಬಳಿಗೆ ತೆರಳಿ ಅವರಲ್ಲಿ ಏನಾದರೊಂದು ವಿಷಯದ ಬಗ್ಗೆ ವಿಚಾರಿಸಿದರೆ ನಲ್ವತ್ತು (ದಿನ)ರಾತ್ರಿಗಳ ಕಾಲ ಅವನ ನಮಾಝನ್ನು ಸ್ವೀಕರಿಸಲ್ಪಡುವುದಿಲ್ಲ." [ಮುಸ್ಲಿಮ್, ಅಹ್ಮದ್]**

ಇನ್ನೊಂದು ಹದೀಸಿನಲ್ಲಿ ಹೀಗಿದೆ:

«مَنْ أَتَى كَاهِنًا أَوْ سَاحِرًا فَصَدَّقَهُ بِمَا يَقُولُ فَقَدْ كَفَرَ بِمَا أُنْزِلَ عَلَى مُحَمَّدٍ ﷺ».

**"ಯಾರಾದರೂ ಜ್ಯೋತಿಷ್ಯರ (ತಂಗಳ್, ಬಾಬಾ, ಬೀಬಿ ಮೊದಲಾದವರ) ಅಥವಾ ಮಾಟ ಮಾಡುವವರ ಬಳಿಗೆ ಹೋಗಿ ಅವರು ಹೇಳುವುದನ್ನು ಸತ್ಯಪಡಿಸಿದರೆ (ನಂಬಿದರೆ) ಮುಹಮ್ಮದ್(ﷺ)ರವರ ಮೇಲೆ ಅವತೀರ್ಣಗೊಂಡ ಕುರ್‌ಆನ್ ಹಾಗೂ ಸುನ್ನತ್ತಿನಲ್ಲಿ ಅವನು ಅವಿಶ್ವಾಸವಿಟ್ಟಿದ್ದಾನೆ." [ಅಲ್‌ಬಝ್ಝಾರ್]**

ಜ್ಯೋತಿಷ್ಯವು ಹಲವಾರು ವಿಧಗಳಲ್ಲಿವೆ. ಉದಾಹರಣೆಗೆ: ಕವಡೆಗಳನ್ನು ಹಾಕುವುದು, ಉಂಗುರಗಳನ್ನು ನೋಡುವುದು, ಗಿಳಿ ಲಕ್ಷಣ ನೋಡುವುದು, ಹಸ್ತವನ್ನು ಓದುವುದು, ಪತ್ರಿಕೆಗಳಲ್ಲಿ ಬರುವ ದಿನ ಭವಿಷ್ಯ, ಅಥವಾ ವಾರ ಭವಿಷ್ಯಗಳನ್ನು ಓದುವುದು ಇತ್ಯಾದಿ. ಇವೆಲ್ಲವೂ ಸುಳ್ಳು ಮತ್ತು ಮೋಸಗಳಾಗಿವೆ. ಊಹಿಸಿ ಹೇಳುವುದಾಗಿದೆ. ಅವರು ಹೇಳುವುದರಲ್ಲಿ ಕೆಲವು ಸತ್ಯವಾಗುವುದಿದೆ. ಆದರೆ ಅದು ಅವರಿಗೆ ಗೈಬ್ (ಅಗೋಚರ) ವಿಷಯಗಳು ಅರಿತಿರುವುದರಿಂದಲ್ಲ. ಬದಲಾಗಿ ಅವರು ಜಿನ್ನ್‌ಗಳಲ್ಲಿರುವ ಶೈತಾನರಿಂದ ಸಹಾಯವನ್ನು ಪಡೆಯುವುದರಿಂದಾಗಿದೆ.

ಆಯಿಶಾ(ؓ)ರವರು ಪ್ರವಾದಿ(ﷺ)ರವರೊಂದಿಗೆ ಜ್ಯೋತಿಷ್ಯರ ಬಗ್ಗೆ ಕೇಳಿದಾಗ ಪ್ರವಾದಿ(ﷺ)ರವರು ಹೇಳಿದರು:

«لَيْسُوا بِشَيْءٍ».

**"ಅವರಿಗೆ ಅಗೋಚರ ವಿಷಯಗಳೇನೂ ಗೊತ್ತಿಲ್ಲ."**

ಆಗ ಆಯಿಶಾ(ﷺ)ರವರು ಹೇಳಿದರು: **“ಅವರು ಹೇಳುವ ಮಾತುಗಳು ಕೆಲವೊಮ್ಮೆ ಸತ್ಯವಾಗುತ್ತದೆಯಲ್ಲವೇ?”** ಆಗ ಪ್ರವಾದಿ(ﷺ)ರವರು ಹೇಳಿದರು:

«تِلْكَ الْكَلِمَةُ مِنَ الْحَقِّ يَخْطَفُهَا الْجِنِّيُّ فَيَقُرُّهَا فِي أُذُنِ وَلِيِّهِ فَيَخْلِطُونَ فِيهَا أَكْثَرَ مِنْ مِائَةِ كَذْبَةٍ».

**“ಆ ಸತ್ಯ ಮಾತು ಜಿನ್ನ್ ಕಸಿದು ತರುವಂತದ್ದಾಗಿದೆ. ಜಿನ್ನ್ ಅದನ್ನು ಜ್ಯೋತಿಷ್ಯನ ಕಿವಿಯಲ್ಲಿ ಹಾಕುತ್ತದೆ. ಜ್ಯೋತಿಷ್ಯನು ಅದಕ್ಕೆ ನೂರಕ್ಕಿಂತಲೂ ಹೆಚ್ಚು ಸುಳ್ಳುಗಳನ್ನು ಬೆರೆಸಿ ಹೇಳುತ್ತಾನೆ.” [ಅಲ್‌ಬುಖಾರೀ]**

## 6. ಶಕುನ ನೋಡುವುದು:

ಶಕುನ ನೋಡುವುದು ಶಿರ್ಕ್ ಆಗಿದೆ. ಕೆಲವರು ಪ್ರಯಾಣ ಮಾಡಲು ಅಥವಾ ಮದುವೆಯಾಗಲು ಅಥವಾ ಇನ್ನಿತರ ಯಾವುದಾದರೂ ಕಾರ್ಯವನ್ನು ಮಾಡಲು ಬಯಸುವಾಗ ಅದಕ್ಕಾಗಿ ದಿನ ನೋಡುತ್ತಾರೆ. ಅದೇ ರೀತಿ ಕೆಲವರು ದಾರಿ ಮಧ್ಯೆ ಗೂಬೆ ಕೂಗುವುದನ್ನು ಕೇಳಿದರೆ, ಕಪ್ಪು ಬೆಕ್ಕನ್ನು ಕಂಡರೆ ಅಪಶಕುನವೆನ್ನುತ್ತಾ ಅರ್ಧದಲ್ಲೇ ಹಿಂದಿರುಗುತ್ತಾರೆ. ಕೆಲವರು 13 ಸಂಖ್ಯೆಯನ್ನು ಅಪಶಕುನವೆನ್ನುತ್ತಾರೆ. ಕೆಲವರು ಇಂತಿಂತಹ ಬಣ್ಣವು ಅಪಶಕುನವೆನ್ನುತ್ತಾರೆ. ಈ ಅಪಶಕುನಗಳು ಕೆಡುಕನ್ನು ಅಥವಾ ಹಾನಿಯನ್ನುಂಟು ಮಾಡುತ್ತವೆ ಎಂದು ಭಯಪಟ್ಟು ಇವರು ತಮ್ಮ ಕಾರ್ಯಕಲಾಪಗಳು ಮೊಟಕುಗೊಳಿಸುತ್ತಾರೆ. ಇದು ಶಿರ್ಕ್ ಆಗಿದೆ.

ಅಲ್‌ಕಾದೀ ಇಯಾದ್(ﷺ) ಹೇಳುತ್ತಾರೆ:

إِنَّمَا سَمَّاهَا شِرْكًا لِأَنَّهُمْ كَانُوا يَرَوْنَ مَا يَتَشَاءَمُونَ بِهِ مُؤَثِّرًا فِي حُصُولِ الْمَكْرُوهِ. وَمُلَاحَظَةُ الْأَسْبَابِ دُونَ مُسَبِّبِهَا سُبْحَانَهُ فِي الْجُمْلَةِ شِرْكٌ خَفِيٌّ. فَكَيْفَ إِذَا نَظَرَ إِلَيْهَا جَهَالَةً وَسُوءَ اعْتِقَادٍ؟

**“ಅದನ್ನು ಶಿರ್ಕ್ ಎಂದು ಕರೆದಿರುವುದು ಏಕೆಂದರೆ ಅಪಶಕುನವು ಅನಿಷ್ಟವನ್ನು ತರುವ ವಿಷಯದಲ್ಲಿ ಪರಿಣಾಮ ಬೀರುತ್ತದೆಂದು ಅವರು ನಂಬುವುದರಿಂದಾಗಿದೆ. ಕಾರಣಗಳನ್ನು ಸೃಷ್ಟಿಸುವ ಅಲ್ಲಾಹನನ್ನು ಬಿಟ್ಟು ಕಾರಣಗಳ ಬಗ್ಗೆ ಎಚ್ಚರ ವಹಿಸುವುದು ಶಿರ್ಕ್ ಖಫಿಯ್ಯ್ ಆಗಿದೆ. ಹಾಗಾದರೆ ಅಜ್ಞಾನದಿಂದ ಅಥವಾ ಮೂಢನಂಬಿಕೆಯಿಂದ ಅದನ್ನು ಮಾಡುವವನ ಸ್ಥಿತಿ ಹೇಗಿರಬಹುದು?”**

ಶಕುನ ನೋಡುವುದನ್ನು ಬಿಟ್ಟುಬಿಟ್ಟು ಎಲ್ಲ ವಿಷಯಗಳಲ್ಲೂ ಅಲ್ಲಾಹನ ಮೇಲೆ ಭರವಸೆಯಿಡುವುದು ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ. ಅಲ್ಲಾಹು ಹೇಳುತ್ತಾನೆ:

﴿ وَمَنْ يَتَّقِ اللَّهَ يَجْعَلْ لَهُ مَخْرَجًا * وَيَرْزُقْهُ مِنْ حَيْثُ لَا يَحْتَسِبُ وَمَنْ يَتَوَكَّلْ عَلَى اللَّهِ فَهُوَ حَسْبُهُ ﴾

**"ಯಾರು ಅಲ್ಲಾಹನನ್ನು ಭಯಪಡುತ್ತಾನೋ ಅವನಿಗೆ ಅಲ್ಲಾಹು ಹೊರಹೋಗುವ ಮಾರ್ಗವನ್ನು ಮಾಡಿಕೊಡುವನು ಮತ್ತು ಅವನು ಊಹಿಸದ ಕಡೆಯಿಂದ ಅವನಿಗೆ ಅನ್ನಾಧಾರವನ್ನು ಒದಗಿಸುವನು. ಯಾರು ಅಲ್ಲಾಹನ ಮೇಲೆ ತವಕ್ಕುಲ್ ಮಾಡುತ್ತಾನೋ (ಭರವಸೆಯಿಡುತ್ತಾನೋ) ಅವನಿಗೆ ಅಲ್ಲಾಹು ಸಾಕು." [ಕುರ್‌ಆನ್ 65:2–3]**

### 7. ರಿಯಾಅ್ (ತೋರಿಕೆ):

ಒಂದು ಕರ್ಮವು ಸ್ವೀಕಾರವಾಗಬೇಕಾದರೆ ಅದಕ್ಕಿರುವ ಎರಡು ಶರತ್ತುಗಳ ಪೈಕಿ ಒಂದು ಅದು ಅಲ್ಲಾಹನಿಗೋಸ್ಕರ ನಿಷ್ಕಳಂಕವಾಗಿ ರಬೇಕು ಎಂಬುದಾಗಿದೆ. ಆದ್ದರಿಂದ ಯಾರಾದರೂ ತೋರಿಕೆಗಾಗಿ ಅಥವಾ ಜನರು ಕಾಣುವುದಕ್ಕಾಗಿ ನಮಾಝ್ ಮಾಡಿದರೆ, ಅಥವಾ ದಾನಧರ್ಮ ಮಾಡಿದರೆ, ಅಥವಾ ಹಜ್ಜ್ ನಿರ್ವಹಿಸಿದರೆ ಅಥವಾ ಶೌರ್ಯವನ್ನು ಪ್ರದರ್ಶಿಸಿದರೆ ಅವನ ಆ ಕರ್ಮವನ್ನು ಅಲ್ಲಾಹು ಸ್ವೀಕರಿಸುವುದಿಲ್ಲ. ಬದಲಾಗಿ ಅದನ್ನು ಅವನೆಡೆಗೇ ಮರಳಿಸಲಾಗುತ್ತದೆ. ಅಲ್ಲಾಹು ಹೇಳುತ್ತಾನೆ:

﴿ وَمَا أُمِرُوا إِلَّا لِيَعْبُدُوا اللَّهَ مُخْلِصِينَ لَهُ الدِّينَ حُنَفَاءَ وَيُقِيمُوا الصَّلَاةَ وَيُؤْتُوا الزَّكَاةَ وَذَلِكَ دِينُ الْقَيِّمَةِ ﴾

**"ಧರ್ಮವನ್ನು ಅಲ್ಲಾಹನಿಗೆ ನಿಷ್ಕಳಂಕಗೊಳಿಸಿ ಋಜುಮನಸ್ಕ ರಾಗಿ ಅಲ್ಲಾಹನನ್ನು ಮಾತ್ರ ಆರಾಧಿಸಬೇಕು; ನಮಾಝನ್ನು ನಿರ್ವಹಿಸಬೇಕು ಮತ್ತು ಝಕಾತನ್ನು ನೀಡಬೇಕು ಎಂಬುದರ ಹೊರತು ಅವರೊಂದಿಗೆ ಬೇರೇನನ್ನೂ ಆದೇಶಿಸಲಾಗಿಲ್ಲ. ಅದೇ ನೇರವಾದ ಧರ್ಮ." [ಕುರ್‌ಆನ್ 98:5]**

ತೋರಿಕೆಯು ಕರ್ಮವನ್ನು ನಿಷ್ಫಲಗೊಳಿಸುವುದು ಮಾತ್ರವಲ್ಲದೆ ಅದು ಆತ್ಮವಂಚನೆಯೂ ಆಗಿದೆ. ಅಲ್ಲಾಹು ಹೇಳುತ್ತಾನೆ:

﴿ إِنَّ الْمُنَافِقِينَ يُخَادِعُونَ اللَّهَ وَهُوَ خَادِعُهُمْ وَإِذَا قَامُوا إِلَى الصَّلَاةِ قَامُوا كُسَالَى يُرَاءُونَ النَّاسَ وَلَا يَذْكُرُونَ اللَّهَ إِلَّا قَلِيلًا ﴾

**“ಖಂಡಿತವಾಗಿಯೂ ಕಪಟವಿಶ್ವಾಸಿಗಳು ಅಲ್ಲಾಹನನ್ನು ವಂಚಿಸುತ್ತಿದ್ದಾರೆ. ಆದರೆ (ವಾಸ್ತವವಾಗಿ) ಅಲ್ಲಾಹು ಅವರನ್ನು ವಂಚಿಸುತ್ತಿದ್ದಾನೆ. ಅವರು ನಮಾಝ್‌ಗಾಗಿ ನಿಲ್ಲುವಾಗ ಉದಾಸೀನರಾಗಿ ಮತ್ತು ಜನರಿಗೆ ತೋರಿಸುವುದಕ್ಕಾಗಿ ನಿಲ್ಲುತ್ತಾರೆ. ಅವರು ಬಹಳ ಸ್ವಲ್ಪವೇ ಹೊರತು ಅಲ್ಲಾಹನನ್ನು ಸ್ಮರಿಸುವುದಿಲ್ಲ.” [ಕುರ್‌ಆನ್ 4:142]**

ಪ್ರವಾದಿ(ﷺ)ರವರು ಹೇಳಿದರು:

«أَلَا أُخْبِرُكُمْ بِمَا هُوَ أَخْوَفُ عَلَيْكُمْ عِنْدِي مِنْ الْمَسِيحِ الدَّجَّالِ؟»

**“ನಾನು ನಿಮ್ಮ ಬಗ್ಗೆ ದಜ್ಜಾಲ್‌ಗಿಂತಲೂ ಹೆಚ್ಚು ಭಯಪಡುವ ಒಂದು ವಿಷಯದ ಬಗ್ಗೆ ನಿಮಗೆ ತಿಳಿಸಿಕೊಡಲೇ?”**

ಸಹಾಬಾಗಳು ತಿಳಿಸಿಕೊಡಬೇಕೆಂದು ಹೇಳಿದಾಗ ಪ್ರವಾದಿ(ﷺ)ರವರು ಹೇಳಿದರು:

«الشِّرْكُ الْخَفِيُّ أَنْ يَقُومَ الرَّجُلُ يُصَلِّي فَيُزَيِّنُ صَلَاتَهُ لِمَا يَرَى مِنْ نَظَرِ رَجُلٍ.»

**“ಅದು ಶಿರ್ಕ್ ಖಫಿಯ್ಯ್ (ಗುಪ್ತ ಶಿರ್ಕ್) ಆಗಿದೆ. ಅಂದರೆ ಒಬ್ಬ ವ್ಯಕ್ತಿ ನಮಾಝ್ ಮಾಡಲು ನಿಲ್ಲುತ್ತಾನೆ. ಆಗ ಜನರು ಅದನ್ನು ನೋಡುತ್ತಿದ್ದಾರೆಂದು ಅರಿತಾಗ ಅವನು ತನ್ನ ನಮಾಝನ್ನು ಅಂದಗೊಳಿಸುತ್ತಾನೆ.”** [ಇಬ್ನ್ ಮಾಜ]

وَصَلَّ اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********